10.95 ಲಕ್ಷ ಕೊರತೆ ಬಂದಿದ್ದು ಅದನ್ನು ಬೇರೆ ಲೆಕ್ಕ ಶೀರ್ಷಿಕೆಯಿಂದ ಮರು ಹೊಂದಾಣಿಕೆ ಮಾಡಲು ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

**ಪುತ್ತೂರು ಪುರಸಭೆಯಲ್ಲಿ ಪ್ರಸ್ತುತ ಖಾಲಿ ಇರುವ ಹುದ್ದೆಗಳು**

436 - ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಪುರಸಭೆಯಲ್ಲಿ ಪ್ರಸ್ತುತ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು? ಎಷ್ಟು ಸಮಯದಿಂದ ಈ ಹುದ್ದೆಗಳನ್ನು ಖಾಲಿ ಇಡಲಾಗಿತ್ತು ಯಾವಾಗ ಭರ್ತಿ ಮಾಡಲಾಗುವುದು?*

ಆ) *ಪುರಸಭೆಯು ಹೊಂದಿರುವ ಪ್ರಸ್ತುತದ ನೀರು ಸರಬರಾಜು ವ್ಯವಸ್ಥೆ ಪೂರ್ತಿ ಪ್ರಮಾಣದಲ್ಲಿ ನೀರು ಒದಗಿಸಲು ಅಸಮರ್ಥವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ಹೊಸ ಯೋಜನೆಗಳೇನು?*

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

ಅ) 13 ಹುದ್ದೆಗಳು ಇವುಗಳಲ್ಲಿ ಕೆಲವು ಹುದ್ದೆಗಳು 1995 ರಿಂದಲೂ ಕೆಲವು ಹುದ್ದೆಗಳು, 1996, 1997 ರಿಂದ ಖಾಲಿ ಇರುತ್ತವೆ. ಈಗ ಖಾಲಿ ಹುದ್ದೆಗಳನ್ನು ಭರ್ತಿ ಮಾಡದಿರುವಂತೆ ಆರ್ಥಿಕ ಇಲಾಖೆಯ ನಿರ್ಬಂಧವಿರುತ್ತದೆ.

ಆ) ಬಂದಿದೆ. ಪುತ್ತೂರು ಪಟ್ಟಣವನ್ನು ಒಳಗೊಂಡು ಕರಾವಳಿ ಪ್ರದೇಶದಲ್ಲಿ 10 ನಗರಗಳಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಯನ್ನು 'ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್' ನೆರವಿನೊಂದಿಗೆ ಕೈಗೆತ್ತಿಕೊಳ್ಳುವ ಯೋಜನೆ ಅಂತಿಮ ಹಂತದಲ್ಲಿದೆ. ಈ ಯೋಜನೆಯ ಜಾರಿಯೊಂದಿಗೆ ಪುತ್ತೂರು ಪುರಸಭೆ ವ್ಯಾಪ್ತಿಯಲ್ಲಿನ ಸಾರ್ವಜನಿಕರಿಗೆ ಪೂರ್ಣ ಪ್ರಮಾಣದಲ್ಲಿ ನೀರು ಒದಗಿಸಲಾಗುವುದು.

**ಗಣಿಕಾರಿಕೆಯಿಂದ ಬೊಕ್ಕಸಕ್ಕೆ ಬಂದ ಹಣ**

437 - ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1998-99 ಮತ್ತು 1999-2000 ಸಾಲುಗಳಲ್ಲಿ ರಾಜ್ಯದ ಬೊಕ್ಕಸಕ್ಕೆ ಗಣಿಗಾರಿಕೆಯಿಂದ ಬಂದ ಒಟ್ಟು ಆದಾಯವೆಷ್ಟು?*

ಆ) *ಮೇಲಿನ ಅವಧಿಯಲ್ಲಿ ಪತ್ತೆ ಹಚ್ಚಲಾದ ಅಕ್ರಮ ಗಣಿಗಾರಿಕೆಯ ತಕ್ಷೀರುಗಳೆಷ್ಟು?*

ಇ) *ಅಕ್ರಮ ಗಣಿಗಾರಿಕೆ ನಿಲ್ಲುಸುವುದಕ್ಕೆ ಸರ್ಕಾರ ಹಮ್ಮಿ ಕೊಂಡಿರುವ ಕಾರ್ಯಕ್ರಮಗಳೇನು?*